OS 5206/2011
PW1

ಸಾಕ್ಷಿಯನ್ನು ಈಹೊತ್ತು ದಿನಾಂಕ ಃ 23.07.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಕೆವಿಪಿ ವಕೀಲರಿಂದ ಃ

ನಾನು ಪ್ರತಿವಾದಿಯ ವಿರುದ್ದ ಸಿ ಸಿ ಹೆಚ್ 32 ರಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಓ ಎಸ್ 8027/02 ದಾಖಲು ಮಾಡಿದ್ದೆನ ಎಂದರೆ ಸರಿ . ಅದಕ್ಕೆ ಸಂಬಂಧಪಟ್ಟಂತೆ ಈಗ ತೋರಿಸುತ್ತಿರುವ ವಾದಪತ್ರದ ದೃಢೀಕೃತ ನಕಲು ಅದೇ ಇರುತ್ತದೆ . ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಅದೇ ದಾವೆಯಲ್ಲಿ ಒಂದು ಮಧ್ಯಂತರ ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ . ಅದರ ದೃಢೀಕೃತ ನಕಲನ್ನು ನೋಡುತ್ತಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಪ್ರತಿವಾದಿ ವೆಂಕಟಚಲಯ್ಯ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ಮಧ್ಯಂತರ ಅರ್ಜಿಗೂ ಸಹ ತಕರಾರು ಸಲ್ಲಿಸಿದ್ದರು ಎಂದರೆ ನೆನಪಿಲ್ಲ. ಸದರಿ ಅರ್ಜಿಯಲ್ಲಿ ನನ್ನ ವಿರುದ್ದ ಆದೇಶವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಆದೇಶದ ದೃಢೀಕೃತ ನಕಲನ್ನು ತೋರಿಸಲಾಗಿ ಸರಿ ಎಂದು ಒಪ್ಪಿಕೊಳ್ಳುತ್ತಾರೆ . ಆದ್ದರಿಂದ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಸದರಿ ಆದೇಶದ ವಿರುದ್ದ ನಾನು ಎಂ ಎಫ್ ಎ 446/2003 ದಾಖಲು ಮಾಡಿದ್ದೆನು ಎಂದರೆ ಸರಿ . ಸದರಿ ಅಫೀಲಿನಲ್ಲಿ ನನ್ನ ವಿನಂತಿಯ ಮೇರೆಗೆ ಸ್ಥಳ ತನಿಖೆ ಮಾಡಿ ಈಗ ತೋರಿಸುತ್ತಿರುವ ದಾಖಲೆ ಪ್ರಕಾರ ಮಹಜರ್ ಮಾಡಿರುತ್ತಾರೆ ಎಂದರೆ ಸರಿ . ಸದರಿ ದಾಖಲೆಯನ್ನು ನಿಡಿ

4 ಎಂದು ಗುರುತಿಸಲಾಯಿತು. ಸ್ಥಳ ತನಿಖೆಯ ಪ್ರಕಾರ ವೆಂಕಟಚಲಯ್ಯರವರು ದಾವಾ ಆಸ್ತಿಯಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ . ಸದರಿ ವರದಿಯ ದೃಢೀಕೃತ ನಕಲನ್ನು ತೋರಿಸುತ್ತಿದ್ದು ಅದನ್ನು ನಿಡಿ 5 ಎಂದು ಗುರುತಿಸಲಾಯಿತು. ಆ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸದರಿ ಎಂ ಎಫ್ ಎ ನ್ನು ಅಂತಿಮವಾಗಿ ನಿರ್ಣಯ ಮಾಡಿರುತ್ತಾರೆ ಎಂದರೆ ಸರಿ . ಸದರಿ ನಿರ್ಣಯದ ಆದೇಶದ ದೃಢೀಕೃತ ನಕಲನ್ನು ತೋರಿಸುತ್ತಿದ್ದು ಅದನ್ನು ನಿಡಿ 6 ಎಂದು ಗುರುತಿಸಲಾಯಿತು . ಈಗ ಪ್ರತಿವಾದಿ ವೆಂಕಟಚಲಯ್ಯರವರು ಇದೇ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಿರುತ್ತಾರೆ ಎಂದರೆ ಸರಿ .

2. ನಾನು ದಾಖಲು ಮಾಡಿದ ಓ ಎಸ್ 8027/02 ದಾವೆಯು ದಿ ಃ 21.08.2007 ರಂದು ವಜಾ ಆಗಿದೆ ಎಂದರೆ ಸರಿ . ರೊಜುನಾಮೆಯ ದೃಢೀಕೃತ ನಕಲನ್ನು ತೋರಿಸುತ್ತಿದ್ದು ಅದನ್ನು ನಿಡಿ 7 ಎಂದು ಗುರುತಿಸಲಾಯಿತು .

3. ನನಗೆ 7 ಎಕರೆ ಜಮೀನನ್ನು ದಾವಾ ಆಸ್ತಿ ಒಳಗೊಂಡು ಮಾರಾಟ ಮಾಡಿದ ಕೆ ಸಿ ಕೃಷ್ಣಯ್ಯರವರು ಓ ಎಸ್ ನಂಬರ್ 7/04 ನೇ ದನ್ನು ಸದರಿ ಆಸ್ತಿಯ ಮೂಲ ಮಾಲೀಕರ ವಿರುದ್ದ ದಾಖಲು ಮಾಡಿದ್ದರು ಎಂದರೆ ಸರಿ . ಸದರಿ ದಾವೆಯ ವಾದ ಪತ್ರದ ದೃಢೀಕೃತ ನಕಲು ತೋರಿಸುತ್ತಿದ್ದು ಅದೇ ಇರುತ್ತದೆ ಅದನ್ನು ನಿಡಿ 8 ಎಂದು ಗುರುತಿಸಲಾಯಿತು . ಸದರಿ ದಾವೆಯು ವಿಚಾರಣೆ ಆದ ಮೇಲೆ ವಜಾ ಗೊಂಡಿದೆ ಎಂದರೆ ಸರಿ . ಆ

OS 5206/2011
PW1

ಬಗ್ಗೆ ತೀರ್ಪಿನ ದೃಢೀಕೃತ ನಕಲನ್ನು ತೋರಿಸುತ್ತಿದ್ದು ಅದನ್ನು ನಿಡಿ 9 ಎಂದು ಗುರುತಿಸಲಾಯಿತು . ಸದರಿ ದಾವೆ ವಜಾ ಆಗಿದ್ದರಿಂದ ಈ ದಾವೆಯಲ್ಲಿ ನನಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ . ಸದರಿ ಆಸ್ತಿಯ ಮೂಲ ಮಾಲೀಕರಾದ ಹೊಂಬಯ್ಯ ಮತ್ತು ಇತರರು ದಿಃ 11.12.1995 ರಂದು ದಾವಾ ಆಸ್ತಿಯನ್ನು ಒಳಗೊಂಡು ಬೇರೆ ಸೈಟುಗಳನ್ನು ಮಾರಾಟ ಮಾಡುವ ಸಲುವಾಗಿ ಎನ್ ಹೆಚ್ ಮೂರ್ತಿರವರಿಗೆ ಜಿಪಿಎ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ವೆಂಕಟಚಲಯ್ಯರವರ ಕ್ರಯಪತ್ರ ನನ್ನ ಕ್ರಯಪತ್ರಕ್ಕಿಂತ ಮೊದಲು ಆಗಿರುತ್ತದೆ ಎಂದರೆ ಸರಿ . ಸದರಿ ಕ್ರಯಪತ್ರದ ಪ್ರಕಾರ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಬೇರೆಯವರಿಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ . ಬಾಡಿಗೆಯನ್ನು ಪ್ರತಿವಾದಿ ಪಡೆಯುತ್ತಿದ್ದಾರೆ ಎಂದರೆ ಸರಿ . ಸದರಿ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .